

# ನಿಮ್ಮಲ್ಲಿರುವ ಟ್ರಂಪ್ ಕಾರ್ಡ್ ಯಾವುದು?

ನಮ್ಮ ನಿಮ್ಮಲ್ಲಿಯೂ ಪ್ರಕೃತಿ ಯಾವುದೋ ಪ್ರತಿಭೆಯನ್ನು ಕರುಣಿಸಿದೆ. ಅನೇಕರಿಗೆ ಇದರ ಅರಿವಾಗುವುದಿಲ್ಲ, ಅರಿವಾಗುವಾಗ ವಯಸ್ಸಾಗಿರುತ್ತದೆ. ಕೆಲವೇ ಕೆಲವರಿಗೆ ಅವರ ನೈಜ ಪ್ರತಿಭೆಯನ್ನು ಗುರುತಿಸಲು ಸಾಧ್ಯವಾಗುತ್ತದೆ.

★ ಪ್ರಕಾಶ ನಡಹಳ್ಳಿ

ಶೀರ್ಷಿಕೆ ಓದಿ, ಅಮೇರಿಕಾದ ನಿಯೋಜಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಕಾರ್ಡೇ ಅಥವಾ ದಿನವಿಡೀ ಮಾಧ್ಯಮಗಳಲ್ಲಿ ಪ್ರಸಾರವಾಗುವ ನಗದು ರಹಿತ ವ್ಯವಹಾರದ ಕಾರ್ಡೇ ಎಂದು ಅಂದುಕೊಳ್ಳಬೇಡಿ. ಇದು ಬೇರೆಯದ್ದೇ ಆದ ಕಾರ್ಡ್. ಅದನ್ನು ತಿಳಿದುಕೊಳ್ಳಲು ಈ ಕಥೆ ಓದಿ:

ನಮ್ಮ ಕಥಾನಾಯಕ ಮಲೆನಾಡಿನ ದಟ್ಟ ಅರಣ್ಯದಿಂದ ಆವೃತವಾದ, ಒಂದು ಪುಟ್ಟ ಹಳ್ಳಿಯಲ್ಲಿ ಹುಟ್ಟಿದ್ದು. ಮನೆಯ ಎದುರಿನ ತಗ್ಗಾದ ಜಾಗದಲ್ಲಿ ಬಾಳೆ, ಅಡಿಕೆ, ಏಲಕ್ಕಿ, ಕಾಳು ಮೆಣಸುಗಳಿರುವ ತೋಟವಾದರೆ; ಹಿಂದೆ ಸೊಪ್ಪಿನ ಬೆಟ್ಟ, ಪಕ್ಕದಲ್ಲಿ ಕಡಿದಾದ ಕಾಲುದಾರಿ, ತೋಟದಲ್ಲಿ ಸದಾಕಾಲ ಜುಳುಜುಳು ಹರಿಯುವ  ಹಳ್ಳ. ಪಕ್ಕದ ಹಳ್ಳಿಗಳನ್ನು ತಲುಪಲಿರುವ ಬೆಟ್ಟದ ಕಾಲುದಾರಿಯ ಇಕ್ಕೆಲಗಳಲ್ಲಿ ಕಣ್ಮನ ಸೆಳೆಯುವಂತಹ ಹಸಿರು ಹುಲ್ಲಿನ ಬೆಟ್ಟ, ಹಕ್ಕಿಗಳ ಕಲರವ. ಒಟ್ಟಾರೆ ಎಲ್ಲೆಲ್ಲೂ ಮೈ ಮನಗಳಿಗೆ ತಂಪಾಗಿರುವ  ವಾತಾವರಣ. ಸಾಯಂಕಾಲವಾದೊಡೆ ಹಕ್ಕಿಗಳ ಟಿವ್ಂ ಟಿವ್ಂ! ಈ ಪರಿಸರದಲ್ಲಿ ಬೆಳೆದಿದ್ದಾನೆ ನಮ್ಮ ಕಥಾನಾಯಕ. ಇವತ್ತಿನ ಸೌಲಭ್ಯಗಳಾದ ವಾಹನ ಸೌಕರ್ಯ, ದೂರವಾಣಿ, ಜಂಗಮವಾಣಿ, ದಾರಿದೀಪ ಇವುಗಳನ್ನು ಕನಸಿನಲ್ಲೂ ಊಹಿಸಲಾರದ ಸ್ಥಿತಿ ಅಂದಿನದು.

ನಮ್ಮ ಕಥಾನಾಯಕನಿಗೆ ಚಿತ್ರ ಬರೆಯುವ ಆಸಕ್ತಿ ತುಂಬಾ ಇತ್ತು. ಪಟ್ಟಣದಿಂದ ದೂರವಿರುವ ಹಳ್ಳಿಯಲ್ಲಿ ಪೆನ್ಸಿಲ್ಲು, ಪೆನ್ನು,  ಕಾಗದದ ಬಳಕೆಯೂ ಇರಲಿಲ್ಲ. ಬಾಳೆ, ಅಡಿಕೆ ಮರದ ಕಾಂಡದ ಮೃದುಭಾಗವನ್ನೇ ಚೂಪಾದ ಮೊಳೆಯಿಂದ ಕೊರೆದು, ಹೂವಿನ, ಗುಬ್ಬಿ ಪಕ್ಷಿಗಳ ಚಿತ್ರ

